**ಕರ್ನಾಟಕ ಸರ್ಕಾರ**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03**

ದೂರವಾಣಿ ಸಂಖ್ಯೆ:08023360109, ಇ-ಮೇಲ್ dpioekseeb@gmail.com


ಸಂಖ್ಯೆ:ಆರ್6/ರಂ.ಶಿ.ಪರೀಕ್ಷೆ/01/2018-19 ದಿನಾಂಕ: 23.11.2018

## ಅಧಿಸೂಚನೆ

ವಿಷಯ: ನೀನಾಸಂ ರಂಗಶಿಕ್ಷಣ ಸಂಸ್ಥೆ, ಹೆಗ್ಗೋಡು, ಸಾಗರ ತಾ॥ ಶಿವಮೊಗ್ಗ ಜಿಲ್ಲೆ, ಈ ಸಂಸ್ಥೆಯ ಅಭ್ಯರ್ಥಿಗಳಿಗೆ ವಾರ್ಷಿಕ ಪರೀಕ್ಷೆ ಮೇ 2019ಕ್ಕೆ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

***

ನೀನಾಸಂ ರಂಗಶಿಕ್ಷಣ ಸಂಸ್ಥೆ, ಹೆಗ್ಗೋಡು, ಸಾಗರ ತಾ॥ ಶಿವಮೊಗ್ಗ ಜಿಲ್ಲೆ, ಇಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಮೇ 2019ರಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ನಡೆಯುವ ರಂಗ ಶಿಕ್ಷಣ ಡಿಪ್ಲೊಮೊ ಪರೀಕ್ಷೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳ ನಾಮಿನಲ್ ರೋಲ್, ಅರ್ಜಿಗಳನ್ನು ಪೂರಕ ದಾಖಲೆಗಳು ಹಾಗೂ ಶುಲ್ಕದೊಂದಿಗೆ ಮಂಡಳಿಗೆ ಸಲ್ಲಿಸಲು ಈ ಕೆಳಗೆ ತಿಳಿಸಿದಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ಅರ್ಜಿಯಲ್ಲಿ ಅಭ್ಯರ್ಥಿಯ ಹೆಸರನ್ನು ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿದ್ದಂತೆ ನಮೂದಿಸುವುದು ಹಾಗೂ ಅದರ ಒಂದು ದೃಢೀಕೃತ ಜೆರಾಕ್ಸ್ ಪ್ರತಿ ಲಗತ್ತಿಸುವುದು. ಇಲಾಖಾ ನಿಯಮಾನುಸಾರ ವಿದ್ಯಾರ್ಥಿಗಳ ದಾಖಲಾತಿ/ಹಾಜರಾತಿ ಕಡ್ಡಾಯವಾಗಿರುತ್ತದೆ. ಅನುಮೋದನಾ ಪ್ರಾಧಿಕಾರ ನಿಗಧಿಪಡಿಸುವ ದಾಖಲಾತಿ ಮಿತಿಗೆ ಬದ್ಧರಾಗಿರುವುದು ಕಡ್ಡಾಯವಾಗಿರುತ್ತದೆ.

| | |
|---|---|
| 1. ವಿದ್ಯಾರ್ಥಿಗಳಿಂದ ಶುಲ್ಕ ಸ್ವೀಕರಿಸಲು ಅಂತಿಮ ದಿನಾಂಕ | 17.12.2018 |
| 2. ಸಂಗ್ರಹವಾದ ಶುಲ್ಕದ ಒಟ್ಟು ಮೊತ್ತಕ್ಕೆ ಸಂಸ್ಥೆ ಮುಖ್ಯಸ್ಥರು ನೆಫ್ಟ್ ಚಲನ್ ಮೂಲಕ ಪಾವತಿಸಲು ಅಂತಿಮ ದಿನಾಂಕ | 19.12.2018 |
| 3. ನೆಫ್ಟ್ ಚಲನ್ ಹಾಗೂ ಅರ್ಜಿಗಳು ಮತ್ತು ಪೂರಕ ದಾಖಲೆಗಳನ್ನು ಮಂಡಳಿಗೆ ಸಲ್ಲಿಸಲು ಕೊನೆಯ ದಿನಾಂಕ | 27.12.2018 |
| 4. ದಿನಾಂಕ: 17.12.2018ರಿಂದ 07.01.2019ರವರೆಗೆ ಪ್ರತಿ ವಿದ್ಯಾರ್ಥಿಗೆ ರೂ.150-00ರಂತೆ ದಂಡಶುಲ್ಕದೊಂದಿಗೆ ಪರೀಕ್ಷಾ ಶುಲ್ಕ ಪಾವತಿಸಲು ಅಂತಿಮ ದಿನಾಂಕ | 07.01.2019 |
| 5. ದಂಡಶುಲ್ಕದೊಂದಿಗೆ ಪಾವತಿಸಿದ ಶುಲ್ಕವನ್ನು ನೆಫ್ಟ್ ಚಲನ್ ಮೂಲಕ ಜಮಾ ಮಾಡುವ ದಿನಾಂಕ | 09.01.2019 |
| 6. ದಂಡ ಶುಲ್ಕ ಪಾವತಿಸಿದ ಅಭ್ಯರ್ಥಿಗಳ ಅರ್ಜಿಗಳು/ಪೂರಕ ದಾಖಲೆ ಹಾಗೂ ನೆಫ್ಟ್ ಚಲನ್‌ನ್ನು ಮಂಡಳಿಗೆ ಸಲ್ಲಿಸುವ ದಿನಾಂಕ | 11.01.2019 |

ಪರೀಕ್ಷಾ ಮಂಡಳಿಯ ಶುಲ್ಕವನ್ನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ನೆಫ್ಟ್ ಚಲನ್ ಮೂಲಕ ಪಾವತಿಸಲು ತಿಳಿಸಿದೆ. ಅದರಂತೆ ಪ್ರಾಚಾರ್ಯರುಗಳು ವಿದ್ಯಾರ್ಥಿಗಳಿಂದ ಪಡೆದ ಪರೀಕ್ಷಾ ಶುಲ್ಕದ ಮೊಬಲಗಿಗೆ ನೆಫ್ಟ್ ಚಲನ್ ಮೂಲಕ ಶುಲ್ಕ ಪಾವತಿಸಿ ಚಲನ್‌ನ್ನು ನಾಮಿನಲ್ ರೋಲ್‌ನೊಂದಿಗೆ ನೇರವಾಗಿ **ಶ್ರೀಮತಿ ಶೋಭ ಜೆ.ಆರ್, ಸಹಾಯಕ ನಿರ್ದೇಶಕರು, (ಇತರೆ ಪರೀಕ್ಷೆಗಳು) 4ನೇ ಮಹಡಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ,**

**ಬೆಂಗಳೂರು-03 ಈ ವಿಳಾಸಕ್ಕೆ ಕಳುಹಿಸುವುದು.** ಅರ್ಜಿಯ ಜೊತೆಯಲ್ಲಿ ಶುಲ್ಕ ಪಾವತಿಸಿದ ಚಲನ್‌ನ ಮೂಲ ಪ್ರತಿಯನ್ನು ತಪ್ಪದೇ ಲಗತ್ತಿಸುವುದು. ನೆಫ್ಟ್ ಚಲನ್ ಲಗತ್ತಿಸದೇ ಇದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು. (ಶುಲ್ಕ ಪಾವತಿಸಲು ಅನುಕೂಲವಾಗುವಂತೆ ನೆಫ್ಟ್ ಚಲನ್‌ಗಳನ್ನು ಇದರೊಂದಿಗೆ ರವಾನಿಸಿದೆ.)

| | |
|---|---|
| 1. ಪರೀಕ್ಷಾ ಶುಲ್ಕ | ರೂ.1040-00 |
| 2. ಅರ್ಜಿ ಶುಲ್ಕ | ರೂ.30-00 |
| 3. ಫಲಿತಾಂಶವನ್ನು ತಲುಪಿಸುವ ಶುಲ್ಕ | ರೂ.20-00 |
| **ಪ್ರತಿ ಅಭ್ಯರ್ಥಿಗೆ ಒಟ್ಟು** | **ರೂ.1090-00** |
| ಸಂಸ್ಥೆಯ ನೋಂದಣಿ ಶುಲ್ಕ ಪ್ರತ್ಯೇಕವಾಗಿ | ರೂ.1000-00 |

ಅದರಂತೆ ನಿಗದಿತ ಶುಲ್ಕವನ್ನು ಹಾಗೂ ಇತರೆ ಅಗತ್ಯ ದಾಖಲೆಗಳನ್ನು ನಿಗಧಿಪಡಿಸಿದ ದಿನಾಂಕದೊಳಗೆ ಮಂಡಳಿಗೆ ತಲುಪಿಸುವುದು ಹಾಗೂ ನಿಮ್ಮ ಸಂಸ್ಥೆಯ 2018-19ನೇ ಸಾಲಿನ ಮಾನ್ಯತೆ ನವೀಕರಣದ ಪ್ರತಿಯನ್ನು ದೃಢೀಕರಿಸಿ ಸಲ್ಲಿಸಲು ತಿಳಿಸಿದೆ.

(ಕೆ.ಎಸ್.ಮಣಿ)
ನಿರ್ದೇಶಕರು
(ಇತರೆ ಪರೀಕ್ಷೆಗಳು)

**ಇವರಿಗೆ,**

1. ಪ್ರಾಂಶುಪಾಲರು, ನೀನಾಸಂ ರಂಗಶಿಕ್ಷಣ ಸಂಸ್ಥೆ, ಹೆಗ್ಗೋಡು, ಸಾಗರ ತಾ॥ ಶಿವಮೊಗ್ಗ ಜಿಲ್ಲೆ,
2. ಕಛೇರಿ ಪ್ರತಿ.

**ಪ್ರತಿಯನ್ನು:-**

1. ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಜೆ.ಸಿ ರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.